## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ

## ಸಿ.ಸಿ ನಂ.614/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಇಮಾಮ್ ಹುಸೇನ್ | ಪಿ.ಡಬ್ಲ್ಯೂ: 12 |
| ತಂದೆಯ ಹೆಸರು | : | ಮಹಮ್ಮದ್ ಹಬೀಬುಲ್ಲಾ | ಸಿ.ಡಬ್ಲ್ಯೂ: 13 |
| ವಯಸ್ಸು | : | ಸು. 45 ವರ್ಷ | |
| ಉದ್ಯೋಗ | : | ಮುಖ್ಯಪೇದೆ ತುರುವನೂರು ಪೊಲೀಸ್ ಠಾಣೆ | |
| ವಾಸ | : | ತುರವನೂರು | |

ದಿನಾಂಕ 14.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಜನವರಿ 2016 ರಿಂದ 2019 ರವರೆಗೆ ನಾನು ಚಿತ್ರದುರ್ಗದ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿನಾಂಕ 15.10.2017 ರಂದು ಸಂಜೆ 5.00 ಸಮಯದಲ್ಲಿ ಚಿತ್ರದುರ್ಗ ಉಪವಿಭಾಗದ ಅಪರಾಧ ಪತ್ತೆ ದಳದಲ್ಲಿ ಕರ್ತವ್ಯ ನಿರ್ವಹಿಸಿಸುತ್ತಿರುವಾಗ ನಮ್ಮ ಮುಖ್ಯಸ್ಥರಾದ ಸಿಪಿಐ ಚಾಸಾ 18 ರವರು ಎಂ ಡಿ ಫೈಜುಲ್ಲಾ ರವರು ಚಿತ್ರದುರ್ಗ ನಗರದಲ್ಲಿ ಗಸ್ತು ಮಾಡಲು ತಿಳಿಸಿದಾಗ ನಾನು ಮತ್ತು ಇನ್ನೋರ್ವ ಪೇದೆಯಾದ ಚಾಸಾ 14 ನಾಗರಾಜರವರೊಂದಿಗೆ ಮೆದೇಹಳ್ಳಿ ರಸ್ತೆ, ಸೂಪರ್ ಮಾರ್ಕೇಟ್, ಸಂತೆ ರಸ್ತೆ ಗಸ್ತು ಮಾಡುತ್ತಾ ರಾತ್ರಿ 9.30 ಗಂಟೆ ಸಮಯದಲ್ಲಿ ಚಿತ್ರದುರ್ಗ ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಬಂದೆವು. ಅಲ್ಲಿ ನಮ್ಮನ್ನು ನೋಡಿ ಒಬ್ಬ ಅಸ್ಸಾಮಿ ಅಂಗಡಿಗಳ ಹತ್ತಿರ ತನ್ನ ಇರುವಿಕೆಯನ್ನು ಮರೆಮಾಚಲು ಪ್ರಯತ್ನಿಸಿದನು. ನಾನು ಮತ್ತು ಚಾಸಾ 14 ರವರು ಆತನನ್ನು ಸುತ್ತುವರೆದು ಹಿಡಿದು ಆತನ ಹೆಸರು ವಿಚಾರಿಸಿದಾಗ ಆತ ತಡವರಿಸುತ್ತಾ ಶೌಕತ್ ಚೇಳಗುಡ್ಡ ಎಂದು ತಿಳಿಸಿದನು. ನಂತರ ನಾವುಅನುಮಾನ ಬಂದು ರಾತ್ರಿ 10.00 ಗಂಟೆಗೆ ಆತನನ್ನು ವಶಕ್ಕೆ ಪಡೆದು ಆತನ ಪೂರ್ಣ ವಿಳಾಸ ಕೇಳಿದಾಗ ಆತ ತನ್ನ ಹೆಸರು ಶೌಖತ್ ಆಲಿ ತಂದೆ ಬಾಷಿರ್ ಸಾಬ್ ಚೇಳಗುಡ್ಡ ಎಂದು ತಿಳಿಸಿದನು. ನಂತರ ಆತನನ್ನು ನಗರ ವೃತ್ತ ಕಚೇರಿಯಲ್ಲಿ ನಗರ ವೃತ್ತ ನೀರಿಕ್ಷಕರವರ ಮುಂದೆ ರಾತ್ರಿ 10.30 ಕ್ಕೆ ಹಾಜರುಪಡಿಸಿದೆವು. ವೃತ್ತ ನಿರೀಕ್ಷಕರು ಆತನನ್ನು ಪೂರ್ಣ ವಿಚಾರಣೆಗೆ ಒಳಪಡಿಸಿದರು. ಈ ಬಗ್ಗೆ ನಾನು ನನ್ನ ಹೇಳಿಕೆಯನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸದರಿ ಆರೋಪಿ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆಗಿರುತ್ತಾನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಟಿ ಎಸ್ ವಕೀಲರಿಂದಃ**

ನನಗೆ ಸಿ ಪಿ ಐ ರವರು ಗಸ್ತು ಕರ್ತವ್ಯಕ್ಕೆ ನೇಮಕ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿವಸ ರಾತ್ರಿ 9.00 ಗಂಟೆಗೆ ಚಿತ್ರದುರ್ಗದ ಖಾಸಗಿ ಬಸ್ ನಿಲ್ದಾಣದ ಬಳಿ ನಾವು ಗಸ್ತು ಮಾಡಿದೆವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿವಸ ನಮ್ಮನ್ನು ನೋಡಿ ಅಲ್ಲಿ ಒಬ್ಬ ವ್ಯಕ್ತಿ ಮಾರೆಮಾಚಲು ಪ್ರಯತ್ನ ಪಟ್ಟ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನು ಮೇಲಾದಿಕಾರಿಯವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುಚ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿನಾಂಕ 15.10.2017 ರಲ್ಲಿ ತನಿಖಾದಿಕಾರಿಯವರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ. ನಾನು ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುಚ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ